ದೊಡ್ಡವನಾಗಬಲ್ಲೆ?" ಎಂದು ಪ್ರಶ್ನಿಸಿದನು. ಅದಕ್ಕೆ ಅವಳು, "ಚೆನ್ನಾಗಿ ಉಂಡು ತಿಂದು, ದಿನವೂ ವ್ಯಾಯಾಮ ಮಾಡು. ಮನಸ್ಸನ್ನು ಶಿಸ್ತಿನಲ್ಲಿಟ್ಟುಕೊಂಡಿರು" ಎಂದಳು. ಅಂದಿನಿಂದ ರಾಹುಲನು ವ್ಯಾಯಾಮಶಾಲೆಗೆ ಹೋಗಲಾರಂಭಿಸಿದನು.

ಒಂದು ದಿನ ಭಿಕ್ಷುಗಳು ಅರಮನೆಯ ಪಕ್ಕದಲ್ಲಿಯೇ ಭಿಕ್ಷೆ ಬೇಡುತ್ತಿದ್ದರು. ಅದನ್ನು ಯಶೋಧರೆಯು ಗಮನಿಸಿದಳು. ಒಡನೆ ರಾಹುಲನನ್ನು ಕಂಡು ಹೀಗೆ ಹೇಳಿದಳು: "ನೀನೇಕೆ ಕೆಳಗೆ ಓಡಿಹೋಗಿ, ಬುದ್ಧನಿಗೆ ಭಿಕ್ಷೆ ನೀಡಬಾರದು. ಆಗ ಮರೆಯದೆ, ನಿನ್ನ ಪಿತ್ರಾರ್ಜಿತ ಬಳುವಳಿಯ ಬಗ್ಗೆ ಮತ್ತೆ ಕೇಳು." ರಾಹುಲನು ತಕ್ಷಣ ಸಂತೋಷದಿಂದ ಓಡಿದನು. ಅವನು ತನ್ನ ತಾಯಿಯನ್ನು ಬಹಳವಾಗಿ ಪ್ರೀತಿಸುತ್ತಿದ್ದನು. ಆದರೆ ತನ್ನ ತಂದೆಯನ್ನು ಅಷ್ಟೇ ಪ್ರೀತಿಸುತ್ತಿದ್ದನು. ತನ್ನ ತಾಯಿಯೊಡನೆ ಪ್ರತಿರಾತ್ರಿಯೂ ಕಳೆಯುತ್ತಿದ್ದನು. ಆದರೆ ತನ್ನ ತಂದೆಯೊಡನೆ ಒಂದು ರಾತ್ರಿಯೂ ಕಳೆದಿರಲಿಲ್ಲ. ತನ್ನ ಚಿಕ್ಕಪ್ಪನಾದ ನಂದನನಂತೆಯೇ ತಾನೂ ವಿಹಾರಕ್ಕೆ ಹೋಗಿ, ತನ್ನ ತಂದೆಯೊಡನೆ ಕಾಲ ಕಳೆಯಬೇಕೆಂದು ಅವನಿಗೆ ಆಸೆಯಾಗುತ್ತಿತ್ತು.

ರಾಹುಲ ಅರಮನೆಯ ಹೊರಾಂಗಣವನ್ನು ದಾಟಿದನು. ದಕ್ಷಿಣದ್ವಾರದಿಂದ ಹೊರಗೆ ಹೋಗಿ ತಾನು ತಂದಿದ್ದ ಆಹಾರವನ್ನು ತನ್ನ ಪುಟ್ಟ ಕೈಗಳಿಂದ ಬುದ್ಧನ ಭಿಕ್ಷಾಪಾತ್ರೆಗೆ ಹಾಕಿದನು. ಮಹಡಿಯಿಂದ ಈ ದೃಶ್ಯವನ್ನು ಯಶೋಧರೆ ನೋಡುತ್ತಿದ್ದಳು. ತನ್ನ ತಂದೆಗೇ ಮಗನೊಬ್ಬ ಭಿಕ್ಷೆ ನೀಡುವ ದೃಶ್ಯವನ್ನು ಕಂಡಾಗ ಅವಳ ಕಣ್ಣುಗಳಿಂದ ಅಶ್ರುಧಾರೆ ಹರಿಯಿತು. ಅದು ಸಂತಸದ ಕಣ್ಣೀರೇ, ಇಲ್ಲವೇ ದುಃಖದ್ದೇ? ಅದು ಅವಳ ಅಂತರಂಗಕ್ಕೆ ಮಾತ್ರವೇ ತಿಳಿದಿತ್ತು.

ರಾಹುಲ ತಾನು ಹಿಂದೆ ಕೇಳಿದ್ದ ಪ್ರಶ್ನೆಯನ್ನೇ ಮತ್ತೆ ಕೇಳಿದನು: "ನನ್ನ ಪಿತ್ರಾರ್ಜಿತವಾದ ಬಳುವಳಿಯನ್ನು ಯಾವಾಗ ನೀಡುವಿರಿ?" ಇದಕ್ಕೆ ಬುದ್ಧ ನಕ್ಕು ಹೀಗೆಂದನು: "ಪಿತ್ರಾರ್ಜಿತ ಬಳುವಳಿ ಬೇಕೇ? ಹಾಗಾದರೆ ನನ್ನೊಡನೆ ವಿಹಾರಕ್ಕೆ ಬಂದುಬಿಡು." ರಾಹುಲನಿಗೆ ತನ್ನ ಕಿವಿಗಳಲ್ಲಿ ಕೇಳಿದ್ದನ್ನು ತಾನೇ ನಂಬಲಾಗಲಿಲ್ಲ. "ಏನು ತಂದೆಯು ನನ್ನನ್ನು ವಿಹಾರಕ್ಕೆ ಆಹ್ವಾನಿಸುತ್ತಿದ್ದಾರೆಯೇ?" ಅವನ ಸಂತಸಕ್ಕೆ ಮೇರೆ ಇಲ್ಲದಾಯಿತು. ಕೈಯಲ್ಲಿದ್ದ ಪಾತ್ರೆಯನ್ನು ಎಸೆದು ಬುದ್ಧನನ್ನು ಹಿಂಬಾಲಿಸಲು ಸಿದ್ಧನಾದನು. ದೂರದಿಂದ ನೋಡುತ್ತಿದ್ದ ಯಶೋಧರೆಗೆ ಅವರು ಆಡುತ್ತಿದ್ದ ಮಾತುಗಳು ಕೇಳಿಸಲಿಲ್ಲ. ಆದರೆ ರಾಹುಲನನ್ನು ಬುದ್ಧ ವಿಹಾರಕ್ಕೆ ಕರೆದೊಯ್ಯುತ್ತಿದ್ದಾನೆಂಬುದು ಮಾತ್ರ ಗೊತ್ತಾಯಿತು.

ಬುದ್ಧನ ಜೊತೆಗೆ ರಾಹುಲ ವಿಹಾರಕ್ಕೆ ಬಂದಾಗ ಅಲ್ಲಿದ್ದ ಭಿಕ್ಷುಗಳೆಲ್ಲಾ ಅವನನ್ನು ಪ್ರೀತಿಯಿಂದ ಸ್ವಾಗತಿಸಿದರು. ಸಾರಿಪುತ್ತನು ರಾಹುಲನ ಜೊತೆಗೆ ತನ್ನ ಆಹಾರವನ್ನು ಹಂಚಿಕೊಂಡನು. ಅಲ್ಲಿದ್ದ ತನ್ನ ಚಿಕ್ಕಪ್ಪ ನಂದನನ್ನು ಕಂಡು ರಾಹುಲನಿಗೆ ಆನಂದವಾಯಿತು. ಸಾರಿಪುತ್ತನ ಕುಟೀರದಲ್ಲಿ ತಂಗುವಂತೆ ಬುದ್ಧನು ರಾಹುಲನಿಗೆ ಹೇಳಿದನು. ವಿಹಾರದ ಪವಿತ್ರ ವಾತಾವರಣ, ಭಿಕ್ಷುಗಳು ತೋರುತ್ತಿರುವ ಪ್ರೀತಿ – ಇವೆಲ್ಲ ರಾಹುಲನಿಗೆ ತುಂಬ ಹಿಡಿಸಿತು. ಇಲ್ಲಿಯೇ ಎಂದೆಂದೂ ಇದ್ದುಬಿಟ್ಟರೆ ಚೆನ್ನಾಗಿರುತ್ತದೆ ಎಂದು ಅವನು ಅಂದುಕೊಂಡನು. ತನ್ನ ಇಚ್ಛೆಯನ್ನು ಸಾರಿಪುತ್ತನಲ್ಲಿ ವ್ಯಕ್ತಪಡಿಸಿದನು. ಹಾಗೆ ಇರಬೇಕಾದರೆ ಭಿಕ್ಷುವಾಗಬೇಕೆಂದು ಸಾರಿಪುತ್ತನು ತಿಳಿಹೇಳಿದನು. ರಾಹುಲನು ಸಾರಿಪುತ್ತನ ಕೈಗಳನ್ನು ಹಿಡಿದುಕೊಂಡು, ತನಗೂ ಭಿಕ್ಷುವಿನ ದೀಕ್ಷೆ ಕೊಡಲು ಬುದ್ಧನಿಗೆ ಹೇಳೆಂದು ಕೇಳಿಕೊಂಡನು. "ನೀನೇ ಬುದ್ಧನಲ್ಲಿ ಹೋಗಿ ಕೇಳು" ಎಂದು ಸಾರಿಪುತ್ತನು ಸೂಚಿಸಿದನು.

ಬುದ್ಧನು ಆಗ ಒಂದು ಮರದ ಕೆಳಗೆ ಕುಳಿತು ಧ್ಯಾನಮಾಡುತ್ತಿದ್ದನು. ಬುದ್ಧನು ರಾಹುಲನ ಬಳಿ ಓಡಿಹೋಗಿ, "ನನಗೂ ಭಿಕ್ಷುವಿನ ದೀಕ್ಷೆ ಕೊಡುವಿರಾ?" ಎಂದು ಕೇಳಿದನು. "ನನ್ನ ಹತ್ತಿರ ಪಿತ್ರಾರ್ಜಿತ ಆಸ್ತಿಗಾಗಿ ಕೇಳುತ್ತಿದ್ದೆಯಲ್ಲಾ. ಅದು ಈಗ ನಿನಗೆ ದೊರೆಯುತ್ತದೆ" ಎಂದನು ಬುದ್ಧ. ಬಳಿಕ ಸಾರಿಪುತ್ತನನ್ನು ಕರೆದು, ರಾಹುಲನಿಗೆ ಭಿಕ್ಷುದೀಕ್ಷೆಯನ್ನು ನೀಡಲು ಹೇಳಿದನು. ಬುದ್ಧ ತಮಾಷೆ ಮಾಡುತ್ತಿದ್ದಾನೆಂದು ಸಾರಿಪುತ್ತನು ಅಂದುಕೊಂಡನು. ಆದರೆ ಬುದ್ಧನ ಮುಖಭಾವ ಗಂಭೀರವಾಗಿತ್ತು. ಕಡೆಗೆ ಸಾರಿಪುತ್ತ ಕೇಳಿಯೇಬಿಟ್ಟನು: "ಆದರೆ ಭಗವಾನ್, ಇಷ್ಟು ಚಿಕ್ಕ ಹುಡುಗ ಹೇಗೆ ತಾನೇ ಭಿಕ್ಷುವಾಗಬಲ್ಲ?"


ಅದಕ್ಕೆ ಬುದ್ಧನು ಹೀಗೆ ಉತ್ತರಿಸಿದನು: "ಮುಂದೆ ಒಬ್ಬ ಉತ್ತಮ ಭಿಕ್ಷುವಾಗುವಂತೆ ಏನೇನು ಸಾಧನೆಗಳನ್ನು ಮಾಡಬೇಕೋ, ಅವಕ್ಕೆ ಸಿದ್ಧತೆ ಮಾಡಿಕೊಳ್ಳುವ ಕೆಲವು ಅಭ್ಯಾಸಗಳನ್ನು ಇವನಿಗೆ ಕಲಿಸಿಕೊಡು. ಭಿಕ್ಷುಗಳು ಕುಳಿತು ಧ್ಯಾನಮಾಡುತ್ತಿರುವಾಗ ಅನೇಕ ಕಾಗೆಗಳು ಕೂಗಾಡುತ್ತಾ ಶಾಂತಿಯನ್ನು ಕೆಡಿಸುತ್ತವೆ. ಇವನಿಗೆ ಒಂದು ಕೋಲು ಕೊಟ್ಟು, ಅವುಗಳನ್ನು ಓಡಿಸುವ ಕೆಲಸ ಕೊಡು. ಆಗ ಸಾಧುಗಳು ಶಾಂತಿಯಿಂದ ಧ್ಯಾನಮಾಡಲು ಸಾಧ್ಯವಾಗುತ್ತದೆ. ಇದೇ ಇವನು ಇಲ್ಲಿ ಮಾಡಬಲ್ಲ ಸೇವೆಯಾಗುತ್ತದೆ. ಸದ್ಯಕ್ಕೆ ಇವನಿಗೆ ಬಾಲಭಿಕ್ಷುವಿನ ದೀಕ್ಷೆ ಕೊಡು." ಹೀಗೆ ಹೇಳಿ ಅದರ ನಿಯಮಗಳನ್ನು ಸಾರಿಪುತ್ತನಿಗೆ ಬುದ್ಧನು ವಿವರಿಸಿದನು.

ಸಾರಿಪುತ್ತನು ರಾಹುಲನ ತಲೆ ಬೋಳಿಸಿದನು. **'ಬುದ್ಧಂ ಶರಣಂ ಗಚ್ಛಾಮಿ; ಧರ್ಮಂ ಶರಣಂ ಗಚ್ಛಾಮಿ; ಸಂಘಂ ಶರಣಂ ಗಚ್ಛಾಮಿ'** ಎಂಬ ಶರಣಾಗತಿಯ ಮಂತ್ರಗಳನ್ನು ಕಲಿಸಿದನು. ಹಾಗೆಯೇ ಬೌದ್ಧಧರ್ಮದ ನಾಲ್ಕು ಮೂಲಭೂತ ನಿಯಮಗಳನ್ನು ಅನುಸರಿಸುವಂತೆ ಹೇಳಿದನು. ಅವೇ, **'ಕೊಲಬೇಡ, ಕಳಬೇಡ, ಅಸತ್ಯ ನುಡಿಯಬೇಡ** ಮತ್ತು **ಮದ್ಯಸೇವನೆ ಮಾಡಬೇಡ'** ಎಂಬುದು. ರಾಹುಲನಿಗೆ ಇವೆಲ್ಲ ಬಹಳ ಸುಲಭವಾದ ನಿಯಮಗಳು ಎನ್ನಿಸಿತು.

ಸಾರಿಪುತ್ತನು ತನ್ನದೇ ಒಂದು ವಸ್ತ್ರವನ್ನು ಹರಿದು, ರಾಹುಲನ ಅಳತೆಗೆ ಕತ್ತರಿಸಿದನು. ಅದನ್ನು ಹೇಗೆ ಧರಿಸಬೇಕೆಂಬುದನ್ನೂ ತೋರಿಸಿಕೊಟ್ಟನು. ಅವನ ಕೈಗೆ ಒಂದು ಭಿಕ್ಷಾಪಾತ್ರೆಯನ್ನು ಕೊಟ್ಟನು. ಬಾಲಭಿಕ್ಷುವಾದ ರಾಹುಲನು ತೇಜಸ್ಸಿನಿಂದ ಕೂಡಿ ಶೋಭಿಸುತ್ತಿದ್ದನು. ಎಲ್ಲ ಭಿಕ್ಷುಗಳೂ ಅವನನ್ನು ನೋಡಿ ಆನಂದಪಟ್ಟರು. ಅವನ ಮುಖದ ವರ್ಚಸ್ಸನ್ನು ಕಂಡು ಆಶ್ಚರ್ಯಪಟ್ಟರು.

ರಾಹುಲನು ರಾತ್ರಿಯ ವೇಳೆ ಸಾರಿಪುತ್ತನ ಕುಟೀರದಲ್ಲಿಯೇ ಮಲಗುತ್ತಿದ್ದನು. ವಿಹಾರದ ಹತ್ತಿರದಲ್ಲಿದ್ದ ಚಿಕ್ಕ ಚಿಕ್ಕ ಹಳ್ಳಿಗಳಿಗೆ, ಅವನೊಡನೆಯೇ ಭಿಕ್ಷಕ್ಕೆ ಹೋಗುತ್ತಿದ್ದನು. ಮಿಕ್ಕ ಭಿಕ್ಷುಗಳು ಒಪ್ಪತ್ತಿನ ಊಟ ಮಾತ್ರ ಮಾಡುತ್ತಿದ್ದರು. ರಾಹುಲ ಇನ್ನೂ ಚಿಕ್ಕವನು. ಅವನ ದೇಹ ಚೆನ್ನಾಗಿ ಬೆಳೆಯಬೇಕು. ಅದಕ್ಕೆ ತಕ್ಕ ಪೌಷ್ಟಿಕಾಂಶ ಬೇಕು. ಹೀಗಾಗಿ ಸಾರಿಪುತ್ತನು ಪೌಷ್ಟಿಕಾಂಶದ ಕೊರತೆಯಾಗಬಾರದೆಂದು, ಸಾಯಂಕಾಲವೂ ಆಹಾರ ಸೇವಿಸುವಂತೆ ರಾಹುಲನಿಗೆ ಹೇಳಿದನು. ಅವನಿಗೆ ಬೇಕಾಗುತ್ತಿದ್ದ ಹಾಲು ಮೊದಲಾದ ಪುಷ್ಟಿಕರವಾದ ಆಹಾರವನ್ನು ಭಿಕ್ಷುಗಳು ಬೇಡಿ ತರುತ್ತಿದ್ದರು.

*(ಮುಂದುವರೆಯುವುದು)*



# ಶ್ರೀಮದ್ಭಾಗವತ ಸಾರ

ಎ. ಮುರಳೀಧರ

## ಚತುರ್ಥ ಸ್ಕಂಧ

**ಒ**ಮ್ಮೆ ಮರೀಚಿಯೆಂಬ ಪ್ರಜಾಪತಿ ಹಾಗೂ ಋಷಿಮುನಿಗಳೆಲ್ಲ ಸೇರಿಕೊಂಡು ಸತ್ರಯಾಗ ಮಾಡಲು ಆರಂಭಿಸಿದರು. ಈ ಯಾಗಕ್ಕೆ ಇಂದ್ರಾದಿ ಸಕಲದೇವತೆಗಳು ಮತ್ತು ಬ್ರಹ್ಮ ರುದ್ರಾದಿಗಳು ಆಗಮಿಸಿದರು. ವಿಶೇಷವಾಗಿ ಈ ಯಾಗದಲ್ಲಿ ಪಾಲ್ಗೊಳ್ಳಲು ದಕ್ಷ ಪ್ರಜಾಪತಿಯು ಬಂದನು. ಅವನ ಅಸಾಮಾನ್ಯ ತೇಜಸ್ಸನ್ನು ಕಂಡು ಎಲ್ಲರೂ ಅವನಿಗೆ ನಮಸ್ಕರಿಸಿದರು. ರುದ್ರನು ಮಾತ್ರ ಆತನಿಗೆ ನಮಸ್ಕರಿಸಲಿಲ್ಲ. ಏಕೆಂದರೆ, ದಕ್ಷ ಪ್ರಜಾಪತಿಯು ತನ್ನ ಅಳಿಯನಾದ ರುದ್ರದೇವನನ್ನು ಕಂಡರೆ ಅಸಹ್ಯ ಮತ್ತು ನಿರ್ಲಕ್ಷ್ಯದ ಭಾವನೆಯನ್ನು ಬೆಳೆಸಿಕೊಂಡಿದ್ದನು. ಆದ್ದರಿಂದ ರುದ್ರನು ಆತನಿಗೆ ಎಲ್ಲರೆದುರಿಗೆ ನಮಸ್ಕರಿಸದೆ, ಮನದಲ್ಲೇ ವಂದಿಸಿದನು.

ರುದ್ರನು ತನಗೆ ಗೌರವ ಕೊಡದಿದ್ದುದಕ್ಕೆ ಸಿಟ್ಟಿಗೆದ್ದ ದಕ್ಷ ಪ್ರಜಾಪತಿಯು ಅವನಿಗೆ ಅವಮಾನಕರವಾದ ರೀತಿಯಲ್ಲಿ ನಿಂದಿಸಿ ಎಲ್ಲರೆದುರಿಗೂ ಅಪಮಾನ ಮಾಡಿದನು. ರುದ್ರನಿಗೆ ಯಜ್ಞಯಾಗಾದಿಗಳಲ್ಲಿ ಹವಿಸ್ಸನ್ನು ನೀಡಬಾರದೆಂದು ಆಜ್ಞೆ ಮಾಡಿದನು. ಕಾಲಕಳೆದಂತೆ ದಕ್ಷ ಮತ್ತು ರುದ್ರರ ದ್ವೇಷ ಇನ್ನೂ ಹೆಚ್ಚಾಯಿತು. ದಕ್ಷ ಪ್ರಜಾಪತಿಯ ಪ್ರಭಾವ ದಿನದಿನಕ್ಕೂ ಬೆಳೆಯಿತು. ಬ್ರಹ್ಮನು ಇದನ್ನು ಗಮನಿಸಿ ಅವನಿಗೇ ಪ್ರಧಾನಾಧಿಪತ್ಯ ನೀಡಿ ಗೌರವಿಸಿದನು. ಇದರಿಂದ ದಕ್ಷನ ಅಹಂಕಾರ ಮತ್ತಷ್ಟು ಹೆಚ್ಚಾಯಿತು.

ಒಮ್ಮೆ ದಕ್ಷನು ವಾಜಪೇಯಯಾಗವನ್ನು ಮಾಡಬೇಕೆಂದು ನಿಶ್ಚಯಿಸಿದನು. ರುದ್ರನ ಪತ್ನಿಯಾದ ಸತೀದೇವಿಯು ತನ್ನ ತಂದೆಯ ಮನೆಯಲ್ಲಿ ಯಾಗ ನಡೆಯುತ್ತಿರುವ ಸುದ್ದಿ ತಿಳಿದು, ಅಲ್ಲಿಗೆ ಹೋಗಲು ಆಸೆಪಟ್ಟಳು. ತನ್ನ ಪತಿಯಾದ ರುದ್ರನ ಮಾತನ್ನು ಗಣನೆಗೆ ತೆಗೆದುಕೊಳ್ಳದೆ ತಂದೆಯ ಮನೆಗೆ ಬಂದಳು. ಮಗಳನ್ನು ದಕ್ಷನು ಸರಿಯಾಗಿ ಆದರಿಸಲಿಲ್ಲ. ದಕ್ಷನು ಇತರ ದೇವತೆಗಳಿಗೆ ಸಲ್ಲಬೇಕಾದ ಹವಿಸ್ಸನ್ನು ನೀಡಿದನು. ಆದರೆ ರುದ್ರನಿಗೆ ಹವಿಸ್ಸು ನೀಡಲಿಲ್ಲ. ಇದೆಲ್ಲದರಿಂದ ಸತೀದೇವಿಯು ತಂದೆಯ ಮೇಲೆ ಕೋಪಗೊಂಡಳು. ತನ್ನ ಪತಿಯಾದ ರುದ್ರನಿಗೆ ಆದ ಅಪಮಾನ ಕಂಡು ಸಹಿಸಲಾರದೆ ಯಜ್ಞಕುಂಡಕ್ಕೆ ಹಾರಿ ದೇಹತ್ಯಾಗ ಮಾಡಿದಳು. ಇದನ್ನು ಕಂಡ ಸಜ್ಜನರು, ಯೋಗಿಗಳು, ಋಷಿಗಳು ದಂಗಾದರು. ಅವರೆಲ್ಲರೂ ದಕ್ಷನ ರುದ್ರದ್ವೇಷವನ್ನು ಖಂಡಿಸಿದರು.

ಸತೀದೇವಿಯ ದೇಹಹರಣವಾದ ಸುದ್ದಿ ತಿಳಿದ ಶಿವನು ಕೋಪದಿಂದ ಕಿಡಿಕಿಡಿಯಾದನು. ಆಕೆಯ ಮರಣಕ್ಕೆ ತಕ್ಕ ಪ್ರತೀಕಾರ ಮಾಡಬೇಕೆಂದು ತೀರ್ಮಾನಿಸಿದನು. ತನ್ನ ಜಡೆಯನ್ನು ನೆಲಕ್ಕಪ್ಪಳಿಸಿದನು. ಅದರಿಂದ ಅತ್ಯದ್ಭುತವಾದ ಶಕ್ತಿಯೊಂದು ಉದಿಸಿತು. ಆತನೇ ವೀರಭದ್ರನು. ಅವನು ತಂದೆಯಾದ ರುದ್ರನನ್ನು ಕುರಿತು ತನ್ನಿಂದೇನಾಗಬೇಕೆಂದು ಕೋರಿದನು. "ದಕ್ಷಪ್ರಜಾಪತಿಯು ಮಾಡುತ್ತಿರುವ ಯಜ್ಞಮಂಟಪಕ್ಕೆ ಹೋಗು. ಅಲ್ಲಿ ನೆರೆದಿರುವ ದುಷ್ಟರನ್ನು ಸಂಹರಿಸಿ, ಸತೀದೇವಿಯ ದುರ್ಮರಣಕ್ಕೆ ತಕ್ಕ ಶಾಸ್ತಿಮಾಡು" ಎಂದು ಹರನು ವೀರಭದ್ರನಿಗೆ ಆಜ್ಞೆಯನ್ನಿತ್ತನು.

ವೀರಭದ್ರನು ತನ್ನ ಗಣಗಳನ್ನೆಲ್ಲ ಕರೆದುಕೊಂಡು ಬಂದು ಯಜ್ಞಮಂಟಪಕ್ಕೆ ದಾಳಿಯಿಟ್ಟನು. ತ್ರಿಲೋಕಗಳು ನಡುಗುವಂತೆ ಘರ್ಜಿಸಿದನು. ಇದರಿಂದ ಅಹಂಕಾರದಿಂದ ಮೆರೆಯುತ್ತಿದ್ದವರಿಗೆ ಜಂಘಾಬಲವೇ ಉಡುಗಿಹೋದಂತಾಯಿತು. ವೀರಭದ್ರನು ಆವೇಶದಿಂದ ದಕ್ಷ ಪ್ರಜಾಪತಿಯ ಶಿರವನ್ನು ಕತ್ತರಿಸಿ ಹಾಕಿದನು. ದೇವತೆಗಳೆಲ್ಲ ಬ್ರಹ್ಮದೇವನಲ್ಲಿ ಮೊರೆಹೋದರು. ಬ್ರಹ್ಮದೇವನು ಅವರನ್ನೆಲ್ಲ ಕರೆದುಕೊಂಡು ರುದ್ರನಲ್ಲಿ ಶರಣಾದನು. ಇದರಿಂದ ರುದ್ರನು ಶಾಂತನಾಗಿ, ಯಜ್ಞಶಾಲೆಗೆ ಬಂದನು. ಆತನ ಕೃಪಾಕಟಾಕ್ಷ ಬೀಳುತ್ತಿದ್ದಂತೆಯೇ ಎಲ್ಲವೂ ಸರಿಹೋಯಿತು. ರುದ್ರನು ದಕ್ಷನನ್ನೂ ಮತ್ತಿತರರನ್ನೂ ಬದುಕಿಸಿದನು. ಎಲ್ಲರಿಗೂ

ರುದ್ರದೇವನ ಮಹತ್ವ ಮನವರಿಕೆಯಾಯಿತು. ಎಲ್ಲರೂ ಆ ಮಹಾದೇವನಿಗೆ ಗೌರವ ನೀಡಿದರು; ಅರ್ಧಕ್ಕೆ ನಿಂತಿದ್ದ ವಾಜಪೇಯ ಯಾಗವನ್ನು ಪೂರ್ಣಗೊಳಿಸಿದರು.

## ಧ್ರುವನ ವೃತ್ತಾಂತ

ಸ್ವಾಯಂಭುವ ಮನುವಿಗೆ ಉತ್ತಾನಪಾದ ಮತ್ತು ಪ್ರಿಯಂವ್ರತ ಎಂಬ ಇಬ್ಬರು ಮಕ್ಕಳಿದ್ದರು. ಉತ್ತಾನಪಾದನಿಗೆ ಇಬ್ಬರು ಹೆಂಡತಿಯರಿದ್ದರು. ಹಿರಿಯವಳು ಸುನೀತಿ. ಕಿರಿಯವಳು ಸುರುಚಿ. ಸುರುಚಿ ಸುಂದರಿ. ಯಾವಾಗಲೂ ಲೌಕಿಕ ಸುಖ ದಲ್ಲೇ ಇರುತ್ತಿದ್ದಳು. ಸುನೀತಿಯು ಅತ್ಯಂತ ನೀತಿವಂತಳೂ, ಧರ್ಮಿಷ್ಠಳೂ ಆಗಿದ್ದಳು. ರಾಜನಿಗೆ ಹಿರಿಯವಳಿಗಿಂತ ಕಿರಿಯ ಹೆಂಡತಿಯ ಮೇಲೆಯೇ ಮೋಹ. ಹೀಗಾಗಿ ಅವನು ಸುನೀತಿ ಯನ್ನು ಅನಾದರದಿಂದ ನೋಡುತ್ತಿದ್ದನು. ಸುನೀತಿಯ ಮಗ ಧ್ರುವ. ಸುರುಚಿಯ ಮಗ ಉತ್ತಮ.

ಒಂದು ದಿನ ಉತ್ತಾನಪಾದ ಸಿಂಹಾಸನದಲ್ಲಿ ಕುಳಿತು ಕೊಂಡಿದ್ದ. ಆಗ ಸುರುಚಿಯ ಮಗನನ್ನು ತೊಡೆಯ ಮೇಲೆ ಕುಳ್ಳಿರಿಸಿಕೊಂಡಿದ್ದ. ಆಗ ಅಲ್ಲಿಗೆ ಸುನೀತಿಯ ಮಗ ಧ್ರುವ ಆಡುತ್ತ ಬಂದ. ತಾನೂ ತನ್ನ ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳಲು ಆಸೆಪಟ್ಟ. ಅದಕ್ಕೆ ಸುರುಚಿ, "ನಿನಗೆ ಆ ಅರ್ಹತೆಯಿಲ್ಲ. ಅರಣ್ಯಕ್ಕೆ ತೆರಳಿ ದೇವರನ್ನು ಕುರಿತು ತಪಸ್ಸು ಮಾಡಿ, ನನ್ನ ಹೊಟ್ಟೆಯಲ್ಲಿ ಹುಟ್ಟಿದರೆ ಮಾತ್ರವೇ ಅರ್ಹತೆ ಬರುತ್ತದೆ" ಎಂದು ಅನಾದರದ ಮಾತುಗಳನ್ನು ಆಡಿದಳು.

ಧ್ರುವನು ಅಳುತ್ತಲೇ ತಾಯಿಯ ಬಳಿಗೆ ಬಂದನು. ಮಗನ ದುಃಖವನ್ನು ಕಂಡು ಸುನೀತಿ ತಾನೂ ದುಃಖಿಸಿದಳು. "ಮಗು, ನಿನಗಾದ ನೋವು ಹತಾಶೆಗಳಿಗೆಲ್ಲ ಒಂದೇ ಪರಿಹಾರವಿದೆ. ಅರಣ್ಯಕ್ಕೆ ತೆರಳಿ ಭಗವಂತನನ್ನು ಕುರಿತು ತಪಸ್ಸು ಮಾಡು. ಆ ಮೂಲಕ ಆತನ ಅನುಗ್ರಹವನ್ನು ಸಂಪಾದಿಸು. ಅವನು ನಿನ್ನನ್ನು ಸಂರಕ್ಷಿಸುತ್ತಾನೆ" ಎಂದಳು.

ತಾಯಿಯ ಮಾತಿನಂತೆ ಧ್ರುವನು ಅರಣ್ಯಕ್ಕೆ ಬಂದನು. ಮಾರ್ಗದಲ್ಲಿ ನಾರದರು ಎದುರಾದರು. "ಮಗು, ಎಲ್ಲಿಗೆ ಹೊರಟಿದ್ದೀಯಪ್ಪ?" ಎಂದು ಕೇಳಿದರು. ನಡೆದ ವಿಚಾರವನ್ನು ಧ್ರುವನು ನಾರದರಿಗೆ ತಿಳಿಸಿದ. ಶ್ರೀಮನ್ನಾರಾಯಣನನ್ನು ಕಾಣುವ ಬಗೆಯನ್ನು ಹೇಳಬೇಕೆಂದು ವಿನಂತಿಸಿದ. ನಾರದರಿಗೆ ಇದರಿಂದ ಪರಮ ಸಂತೋಷವಾಯಿತು. ಧ್ರುವನಿಗೆ **'ಓಂ ನಮೋ ಭಗವತೇ ವಾಸುದೇವಾಯ'** ಎಂಬ ಮಂತ್ರೋಪದೇಶ ಮಾಡಿ ಆಶೀರ್ವದಿಸಿದರು. ಭಗವಾನ್ ವಾಸುದೇವನ ರೂಪ ವನ್ನು ವರ್ಣಿಸಿದರು. ಆ ರೂಪವು ಧ್ರುವನ ಹೃದಯದಲ್ಲಿ ನೆಲೆಸುವಂತೆ ಮಾಡಿದರು. "ಮಗು, ನೀನು ಯಮುನಾ ನದೀತೀರದಲ್ಲಿರುವ ಮಧುವನ ಎಂಬ ಕ್ಷೇತ್ರಕ್ಕೆ ಹೋಗಿ ತಪಸ್ಸನ್ನು ಮಾಡು" ಎಂದು ಹೇಳಿ ಹೊರಟುಹೋದರು.

ಮಧುವನ ಪ್ರದೇಶಕ್ಕೆ ಬಂದ ಧ್ರುವನು ತನಗೆ ಉಪದೇಶ ವಾಗಿದ್ದ ಮಂತ್ರವನ್ನು ಜಪಿಸುತ್ತ ತಪಸ್ಸಿಗೆ ಕುಳಿತನು. ಮೊದಲ ತಿಂಗಳನ್ನು ಮೂರು ದಿನಗಳಿಗೊಮ್ಮೆ ಗೆಡ್ಡೆಗೆಣಸು ತಿನ್ನುತ್ತ ಕಳೆದನು. ಎರಡನೇ ತಿಂಗಳನ್ನು ಆರು ದಿನಗಳಿಗೊಮ್ಮೆ ಆಹಾರ ಸೇವಿಸುತ್ತ ಕಳೆದನು. ಮೂರನೇ ತಿಂಗಳನ್ನು ಒಂಬತ್ತು ದಿನಗಳಿಗೊಮ್ಮೆ ಆಹಾರ ಸೇವಿಸುತ್ತ ಕಳೆದನು. ನಾಲ್ಕನೇ ತಿಂಗಳಲ್ಲಿ ನೀರನ್ನೂ, ಐದನೇ ತಿಂಗಳಲ್ಲಿ ಕೇವಲ ಗಾಳಿಯನ್ನು ಸೇವಿಸುತ್ತ ಕಳೆದನು. ಆರನೇ ತಿಂಗಳಲ್ಲಿ ಶ್ವಾಸವನ್ನು ನಿರೋಧಿಸಿ, ಹೃದಯದಲ್ಲಿನ ಪರಮಾತ್ಮನ ರೂಪವನ್ನೇ ನೋಡುತ್ತಾ, ಒಂದೇ ಪಾದದ ಮೇಲೆ ನಿಂತು ತಪಸ್ಸು ಮಾಡಿದನು. ಆ ತಪದಿಂದ ಉಂಟಾದ ಜ್ವಾಲೆಯು ಇಂದ್ರಲೋಕವನ್ನೂ ಮುಟ್ಟಿತು. ದೇವತೆಗಳು ಗಾಬರಿಯಿಂದ ವೈಕುಂಠಕ್ಕೆ ಬಂದು ಉದ್ಧರಿಸಬೇಕೆಂದು ಮಹಾವಿಷ್ಣುವಿನಲ್ಲಿ ಶರಣಾಗತರಾದರು. ನಾರಾಯಣನು ಅವರನ್ನು ಸಮಾಧಾನ ಗೊಳಿಸಿ ಗರುಡಾರೂಢನಾಗಿ ಮಧುವನಕ್ಕೆ ಬಂದನು.

ಇದ್ದಕ್ಕಿದ್ದಂತೆ ಧ್ರುವನ ಹೃದಯದಲ್ಲಿದ್ದ ಪರಮಾತ್ಮನ ರೂಪ ಕಣ್ಮರೆಯಾಯಿತು. ಇದಕ್ಕೆ ಬೆಚ್ಚಿ ಧ್ರುವನು ಕಣ್ತೆರೆದು ನೋಡಿದಾಗ, ಎದುರಿಗೆ ಸಾಕ್ಷಾತ್ ಶ್ರೀಮನ್ನಾರಾಯಣನೇ ನಿಂತಿದ್ದನು. ಸಂತಸ ದಿಂದ ಧ್ರುವನ ಬಾಯಿಂದ ಮಾತೇ ಹೊರಡಲಿಲ್ಲ. ಕಣ್ಣುಗಳಿಂದ ಆನಂದಬಾಷ್ಪಗಳು ಧಾರಾಕಾರವಾಗಿ ಉದುರಿದವು. ಬಾಲಕನ ಅಸಹಾಯಕತೆಯನ್ನು ಗಮನಿಸಿದ ನಾರಾಯಣನು ತನ್ನಲ್ಲಿದ್ದ ಶಂಖದಿಂದ ಆತನ ಕೆನ್ನೆಗಳನ್ನು ಸವರಿದನು. ಆಗ ಧ್ರುವನ ಮೈಯಲ್ಲಿ ವಿದ್ಯುತ್‌ಸಂಚಾರವಾಯಿತು; ದೇಹದಲ್ಲಿ ಹೊಸ ಚೈತನ್ಯ ಮೂಡಿತು. ಭಗವಂತನ ಬಗ್ಗೆ ಅರಿವು ಮೂಡಿತು. ಅವನು ಸಾಷ್ಟಾಂಗ ನಮಸ್ಕಾರ ಮಾಡಿದನು. ಹಲವಾರು ರೀತಿಯಲ್ಲಿ ಭಗವಂತನ ಸ್ತುತಿ ಮಾಡಿದನು: "ಕೊನೆಮೊದಲಿಲ್ಲದ ಮಹಾಮಹಿಮನಾದ ಹೇ ಭಗವಂತ. ನೀನು ಏಕನೂ ಹೌದು, ಅನೇಕನೂ ಹೌದು. ನಿನ್ನ ಮಾಯೆಗೆ ಸಿಕ್ಕಿ ಹಲ ವಾರು ಸುಖಗಳನ್ನು ಬೇಡುವವರಿಗೆ ನೀನು ಕಲ್ಪವೃಕ್ಷದಂತೆ ಇದ್ದೀಯೆ. ಮಾಯೆಯನ್ನು ನೀಗಿದವರಿಗೆ ಮೋಕ್ಷವನ್ನು ನೀಡುವವನೂ ನೀನೇ ಆಗಿದ್ದೀಯೆ. ಈ ಮೋಕ್ಷಕ್ಕಿಂತಲೂ ನಿನ್ನ ಸಂಕೀರ್ತನೆಯು ಮಿಗಿಲಾದುದು. ದೇವಾಧಿದೇವ, ಇಂಥ ಸಂಕೀರ್ತನೆಯನ್ನೂ, ಅದರಲ್ಲಿ ನಿರತರಾಗಿರುವ ನಿನ್ನ ಭಕ್ತರ ಸಂಗವನ್ನೂ ನನಗೆ ದಯಪಾಲಿಸು. ನಿನ್ನ ಕೃಪೆಯು ನನ್ನ ಮೇಲೆ ಆಗುತ್ತಲೇ, ಚಿತ್ರವಿಚಿತ್ರವಾಗಿ ವ್ಯಾಪಿಸಿರುವ ಈ ವಿಶ್ವವೆಲ್ಲವೂ ನೀನೇ ಎಂಬ ಅರಿವು ನನಗಾಯಿತು. ಈ ನಿನ್ನ ಲೀಲೆ ಯಾರಿಗೆ ತಾನೇ ಗೋಚರವಾದೀತು? ಆದ್ದರಿಂದ ನಿನ್ನ ಪಾದಗಳಿಗೆ ಶರಣಾಗುತ್ತೇನೆ. ಈಗತಾನೇ ಹುಟ್ಟಿದ ಕರುವನ್ನು ಆಕಳು ರಕ್ಷಿಸುವಂತೆ ನನ್ನನ್ನು ರಕ್ಷಿಸು."

ಅದಕ್ಕೆ ಉತ್ತರವಾಗಿ ಭಗವಂತನು, "ನಿನ್ನ ಮನದ ಬಯಕೆಯನ್ನು ನಾನು ಬಲ್ಲೆನು. ನಿನಗೆ ಮಂಗಳವಾಗುತ್ತದೆ. ನಿನ್ನ ತಂದೆಯು ನಿನ್ನನ್ನು ಸತ್ಕರಿಸುವನು. ನೀನು ಧರ್ಮದಿಂದ ರಾಜ್ಯವನ್ನು ಪರಿಪಾಲಿಸು. ಕಾಲಕ್ರಮೇಣ ಅತ್ಯಂತ ಉನ್ನತವಾದ ಧ್ರುವ ಪದವಿಯನ್ನು ಪಡೆಯುತ್ತೀಯೆ" ಎಂದು ಹೇಳಿ